ಆ) ಭಾಲ್ಕಿ ತಾಲೂಕಿನಲ್ಲಿ ಪ್ರಸಕ್ತ ಸಾಲಿನ ನವೆಂಬರ್–2014 ರ ಅಂತ್ಯಕ್ಕೆ ಒಟ್ಟು 483 ಪರಿವರ್ತಕಗಳು ವಿಫಲಗೊಂಡಿದ್ದು, ವಿಫಲಗೊಂಡ ಎಲ್ಲಾ ಪರಿವರ್ತಕಗಳನ್ನು ದಿನಾಂಕ: 12–12–2014 ರೊಳಗೆ ಬದಲಾಯಿಸಲಾಗಿದೆ.

ಇ) ನಿಯಮಾನುಸಾರ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿಫಲವಾದ ಪರಿವರ್ತಕಗಳನ್ನು 24 ಗಂಟೆಗಳೊಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಫಲವಾದ ಪರಿವರ್ತಕಗಳನ್ನು 72 ಗಂಟೆಯೊಳಗಾಗಿ ಬದಲಾಯಿಸಬೇಕಾಗಿರುತ್ತದೆ.

ಈ) ಬೀದರ್ ವಿಭಾಗದಲ್ಲಿ ಒಂದು ಪರಿವರ್ತಕ ದುರಸ್ತಿ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಭಾಲ್ಕಿ ತಾಲ್ಲೂಕಿನಲ್ಲಿ ಒಂದು ಪರಿವರ್ತಕ ದುರಸ್ತಿ ಕೇಂದ್ರವು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕೇಂದ್ರದ ಪ್ರಗತಿಯು ಸಮರ್ಪಕವಾಗಿಲ್ಲದ ಕಾರಣ ಅಕ್ಟೋಬರ್ 14 ರಿಂದ ಹೊಸ ಗುತ್ತಿಗೆದಾರರಿಗೆ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ವಹಿಸಲಾಗಿದೆ. ಈ ದುರಸ್ತಿ ಕೇಂದ್ರಗಳಿಂದ ಭಾಲ್ಕಿ ತಾಲ್ಲೂಕಿನಲ್ಲಿ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ.

ನಿಟ್ಟೋರು ವಿತರಣ ಕೇಂದ್ರದ ಕಾಮಗಾರಿ ವಿಳಂಬ

1861(1432); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ನಿಟ್ಟೋರು ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು);

ಆ) ಈ ಕಾಮಗಾರಿ ನಿಗದಿತ ಸಮಯಕ್ಕೆ ಪೂರ್ಣಗೊಳ್ಳದಿರಲು ಕಾರಣವೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ನಿಟ್ಟೋರು ಗ್ರಾಮದಲ್ಲಿ 33 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ಉದ್ದೇಶಿಸಿದ್ದು, ಸದರಿ ಉಪಕೇಂದ್ರದ ಅಂದಾಜು ಮೊತ್ತವು ₹ 393.28 ಲಕ್ಷಗಳಾಗಿದ್ದು, ಇದುವರೆಗೆ ₹ 337.17 ಲಕ್ಷವನ್ನು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ 33 ಕೆ.ವಿ ವಿದ್ಯುತ್ ವಿತರಣ ಕೇಂದ್ರದ ಶೇಕಡಾ 50 ಹಾಗೂ 33 ಕೆ.ವಿ ಮಾರ್ಗದ ಶೇಕಡಾ 90% ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ವಿತರಣಾ ಕೇಂದ್ರ ಮತ್ತು 33 ಕೆ.ವಿ. ಮಾರ್ಗದ ಕಾಮಗಾರಿಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು.

ಆ) ನಿಟ್ಟೋರು ವಿತರಣಾ ಕೇಂದ್ರವು, ಕಾರಂಜಾ ನೀರಾವರಿ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದ್ದು, ಸದರಿ ಸ್ಥಳದಲ್ಲಿ ಕಾರಂಜಾ ಯೋಜನೆಯ ಹಳೆಯ ಕಟ್ಟಡಗಳು ಇದ್ದ ಕಾರಣ ಅವುಗಳನ್ನು ನೆಲಸಮಗೊಳಿಸಿ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಗೆ ಹಸ್ತಾಂತರಿಸಲು ವಿಳಂಬವಾಗಿರುತ್ತದೆ.

ವಿತರಣಾ ಕೇಂದ್ರ ಸ್ಥಾಪಿಸುವ ಭೂ ಪ್ರದೇಶವನ್ನು ಅಕ್ಟೋಬರ್–2013 ರಲ್ಲಿ ವಿದ್ಯುತ್ ಗುತ್ತಿಗೆದಾರರಿಗೆ ಹಸ್ತಾಂತರ ಮಾಡಲಾಗಿದೆ. ಈ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರು ನಿಧಾನಗತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಕಾಮಗಾರಿ ನಿಗದಿತ ಸಮಯಕ್ಕೆ ಪೂರ್ಣಗೊಂಡಿರುವುದಿಲ್ಲ.

ಈ ಬಗ್ಗೆ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ವತಿಯಿಂದ ಸದರಿ ಗುತ್ತಿಗೆದಾರರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದ್ದು, ಟೆಂಡರಿನ ಷರತ್ತಿನ ಅನ್ವಯ ಸೂಕ್ತವಾದ ಕ್ರಮ ತೆಗೆದುಕೊಳ್ಳಲಾಗುವುದು.

ಸೌರಶಕ್ತಿ ಘಟಕಗಳನ್ನು ಅಳವಡಿಸುವುದು

1862, ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮಿ ಲೇಔಟ್)

ಬೆಂಗಳೂರು ನಗರದಲ್ಲಿನ ವಸತಿ, ವಾಣಿಜ್ಯ, ಶಿಕ್ಷಣ, ಕೈಗಾರಿಕೆ ಸಂಸ್ಥೆಗಳ ಮೇಲ್ಛಾವಣಿ ಮೇಲೆ ಸೌರಶಕ್ತಿ ಘಟಕಗಳನ್ನು ಅಳವಡಿಸುವ ಯೋಜನೆಯ ರೂಪರೇಷೆಗಳು ಮತ್ತು ನಾಗರೀಕರು ಅನುಸರಿಸಬೇಕಾದ ನಿಯಮಗಳ ವಿವರಗಳು ಕೆಳಕಂಡಂತಿವೆ.

ಮೇಲ್ಛಾವಣಿ ಸೌಕಶಕ್ತಿ ಪಿ.ವಿ. ವ್ಯವಸ್ಥೆಯ ಸಂಪರ್ಕವನ್ನು ಪಡೆದುಕೊಳ್ಳುವುದಕ್ಕಾಗಿ ಸಾಮಾನ್ಯ ಸೂಚನೆಗಳು

1. ಬೆ.ವಿ.ಕಂಪನಿಯ ಗ್ರಾಹಕರಾಗಿದ್ದು, ಗೃಹಬಳಕೆ, ವಾಣಿಜ್ಯ, ಶಿಕ್ಷಣ ಸಂಸ್ಥೆ, ಕೈಗಾರಿಕೋದ್ಯಮ ಇತ್ಯಾದಿ ಪ್ರವರ್ಗದ ಆಸಕ್ತ ಅರ್ಜಿದಾರರು www.bescom.org ಬೆ.ವಿ.ಕಂಪನಿ ಜಾಲತಾಣದಿಂದ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

2. ಮೇಲ್ಛಾವಣಿ ಸೌರಶಕ್ತಿ ಪಿ.ವಿ. ವ್ಯವಸ್ಥೆಗೆ, ಎಂ.ಎನ್.ಆರ್.ಇ. ಸಹಾಯಧನ ಪಡೆದುಕೊಳ್ಳುವ ಅರ್ಜಿದಾರರು ಕನಿಷ್ಠ 1.0 ಕೆ.ಡಬ್ಲ್ಯು.ಪಿ.ಸಾಮರ್ಥ್ಯದಿಂದ ಗರಿಷ್ಠ 500 ಕೆ.ಡಬ್ಲ್ಯು.ಪಿ. ಸಾಮರ್ಥ್ಯದವರೆಗೂ ಅರ್ಜಿಯನ್ನು ಸಲ್ಲಿಸಬಹುದು. ಎಂ.ಎನ್.ಆರ್.ಇ.ಸಹಾಯಧನ ಪಡೆದುಕೊಳ್ಳದ ಅರ್ಜಿದಾರರು 1.0 ಎಮ್.ಡಬ್ಲ್ಯು.ಪಿ. ಸಾಮರ್ಥ್ಯದವರೆಗೂ ಅರ್ಜಿಯನ್ನು ಸಲ್ಲಸಬಹುದು.